3) 2886 Anganwadı Centres ar functıonıng ın rented buıldıngs

A rent of Rs 100/- per month ıs beıng paıd to Anganwadı Centres at rural and nılly regıon wıth less than 50,000 populatıon A rent of Rs 500/- per month ıs beıng paıd to the Anganwadı Centres at urban, rural and hılly regıon wıth more than 50,000 popılatıon

4) Anganwadı buıldıngs are beıng constructed ın a phased manner dependıng upon the avaılabılıty of grants

5) 400 Anganwadı buıldıngs are beıng constructed durıng 2006-07, avaılıng loan facılıty of Rs 8 35 crores from NABARD A grant of Rs 118 20 lakhs has been provıded under the Departmental contrıbutıon to construct 236 Anganwadı buıldıngs durıng the current financıal year

863(745) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಸುತ್ತಮುತ್ತ ನೂತನವಾಗಿ ಟೌನ್ ಶಿಪ್ ನಿರ್ಮಾಣ ಮಾಡಲು ಸರ್ಕಾರ ನಿರ್ಧರಿಸುವುದು ನಿಜವೇ, ಹಾಗಿದಲ್ಲಿ, ಯಾವ ಯಾವ ಟೌನ್ ಶಿಪ್‌ಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ,

ಆ) ಈ ಟೌನ್ ಶಿಪ್ ನಿರ್ಮಾಣಕ್ಕೆ ಎಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುವುದು (ಟೌನ್ ಶಿಪ್‌ವಾರು ವಿವರ ನೀಡುವುದು),

ಇ) ಈ ರೀತಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿರುವ ಭೂಮಿಯಲ್ಲಿ ಪ್ರಸ್ತುತ ಬಳಕೆಯಾಗುತ್ತಿರುವ ಕೃಷಿ ಹಾಗೂ ಕೃಷಿಯೇತರ ಭೂಮಿಯ ವಿಸ್ತೀರ್ಣ ಎಷ್ಟು (ಟೌನ್ ಶಿಪ್‌ವಾರು ವಿವರ ನೀಡುವುದು),

ಈ) ಈ ರೀತಿ ಸ್ವಾಧೀನಪಡಿಸಿಕೊಳ್ಳಲಾಗುವ ಭೂಮಿಯ ಮಾಲೀಕರಿಗೆ ಯಾವ ರೀತಿ ಪುನರ್ವಸತಿ ಸೌಕರ್ಯ ಕಲ್ಪಿಸಿ ಕೊಡಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ನಿಜ ಬಿಡದಿ, ರಾಮನಗರ, ಸಾತನೂರು, ಸೋಲೂರು ಮತ್ತು ನಂದಗುಡಿ ಟೌನ್ ಶಿಪ್‌ಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ

ಆ) ಅಂದಾಜು ವಿಸ್ತೀರ್ಣ ಎಕರೆಗಳಲ್ಲಿ

ಕ್ರ. ಸಂ	ಉಪನಗರಗಳ ಸ್ಥಳಗಳು	ಖಾಸಗಿ ಜಮೀನು	ಸರ್ಕಾರಿ ಜಮೀನು	ಮೊತ್ತ
1	ನಂದಗುಡಿ (ಹೊಸಕೋಟೆ ತಾಲ್ಲೂಕು)	13762	4745	18507
2	ರಾಮನಗರ (ರಾಮನಗರ ತಾಲ್ಲೂಕು)	3621	392	4013
3	ಬಿಡದಿ (ರಾಮನಗರ ತಾಲ್ಲೂಕು)	6959	2725	9684
4	ಸೋಲೂರು (ಮಾಗಡಿ ತಾಲ್ಲೂಕು)	9661	2864	12525
5	ಸಾತನೂರು (ಕನಕಪುರ ತಾಲ್ಲೂಕು)	5891	10341	16232
	ಒಟ್ಟು	**39894**	**21067**	**60961**

ಇ) 5 ಟೌನ್ ಶಿಪ್‌ಗಳ ಪೈಕಿ ಬಿಡದಿ ಟೌನ್ ಶಿಪ್‌ನ್ನು ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಭೂಮಿಯನ್ನು ಸ್ವಾಧೀನಪಡಿಸಲು ಉದ್ದೇಶಿಸಿದ್ದು, ಭೂಮಿಯ ಮೋಜಣಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ ಈ ಕಾರ್ಯ ಪೂರ್ಣಗೊಂಡ ನಂತರ ಕೃಷಿ ಹಾಗೂ ಕೃಷಿಯೇತರ ಭೂಮಿಯ ವಿಸ್ತೀರ್ಣವನ್ನು ದೃಢೀಕರಿಸಲಾಗುವುದು

ಈ) ಪುನರ್ವಸತಿ ಸೌಕರ್ಯದ ಬಗ್ಗೆ ಸಂಬಂಧಪಟ್ಟ ಭೂ ಮಾಲೀಕರೊಂದಿಗೆ ಚರ್ಚಿಸಿ, ಪುನರ್ವಸತಿ ಸೌಕರ್ಯದ ಪ್ಯಾಕೇಜನ್ನು ಅಂತಿಮ ಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ

864(746) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಪ್ರಾಯೋಜಿತ ಜೆ ಎನ್ ಯು ಆರ್ ಎಂ ಯೋಜನೆಯನ್ನು ಬೆಂಗಳೂರು ನಗರದಲ್ಲಿ ಅನುಷ್ಠಾನಗೊಳಿಸುತ್ತಿರುವುದು ನಿಜವೇ,

ಆ) ಹಾಗಿದ್ದಲ್ಲಿ, ಈ ಯೋಜನೆಯ ಅಂದಾಜು ಮೊತ್ತ ಎಷ್ಟು ಹಾಗೂ ಇಲ್ಲಿಯವರೆಗೆ ಬಿಡುಗಡೆಯಾಗಿರುವ ಅನುದಾನ ಎಷ್ಟು,